





# ಉರಗಕ್ಕೆರಡು ಶಿರ

ಪ್ರಕೃತಿಯ ಸೃಷ್ಟಿಯಲ್ಲಿ ವಿಸ್ಮಯಗಳಿಗೆ ಬರವಿಲ್ಲ. ಅದರಲ್ಲಿ ಈ ಎರಡು ತಲೆಗಳಿರುವ ಹಾವೂ ಸೇರಿದೆ. ಎರಡು ತಲೆ ಎಂದರೆ ನಾವು ತಿಳಿದುಕೊಂಡಂತೆ ಬಾಲದಲ್ಲೊಂದು ತಲೆ ಅಲ್ಲ; ಒಂದರ ಪಕ್ಕ ಇನ್ನೊಂದು ತಲೆ!

ಅತೀ ಅಪರೂಪದ ಎರಡು ತಲೆಗಳುಳ್ಳ ಆಲ್ಬಿನೋ ಕ್ಯಾಲಿಫೋರ್ನಿಯಾ ಕಿಂಗ್ ಸ್ನೇಕ್‌ಅನ್ನು ದಕ್ಷಿಣ ಉಕ್ರೇನ್‌ನ ಯಾಲ್ಟಾ ಎಂಬಲ್ಲಿನ ಬ್ಲ್ಯಾಕ್ ಸೀ ರೆಸಾರ್ಟ್‌ನಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಸ್ಕಾಜ್ಕಾ ಅಥವಾ ಫೇರಿ ಟೇಲ್ ಎಂಬ ಹೆಸರಿನ ಈ ಖಾಸಗಿ ಮೃಗಾಲಯ ಈಗ ಎರಡು ತಲೆ ಉರಗದಿಂದ ಜನಾಕರ್ಷಣೆಯ ಕೇಂದ್ರವಾಗಿದೆ.

3 ವರ್ಷ ವಯಸ್ಸಿನ ಈ ಸರೀಸೃಪ 2 ಅಡಿಗಳಷ್ಟು ಉದ್ದವಿದೆ. ಇದನ್ನು ಜರ್ಮನಿಯಿಂದ ಇಲ್ಲಿಗೆ ತಂದಿರಿಸಲಾಗಿದೆ. ಈ ಎರಡು ತಲೆಗಳು ಪರಸ್ಪರ ಬೇರೆ ಬೇರೆಯಾಗಿ ಯೋಚಿಸುತ್ತವೆಯಂತೆ! ಬೇರೆ ಬೇರೆಯಾಗಿಯೇ ಆಹಾರವನ್ನೂ ಸೇವಿಸುತ್ತವೆ. ಮೃಗಾಲಯದ ನಿರ್ದೇಶಕ ಒಲೆಗ್ ಝುಬ್ಕೊವ್ ಹೇಳುವ ಪ್ರಕಾರ, ಇದರ ಒಂದು ತಲೆ ತುಂಬಾ ಚುರುಕಿದ್ದರೆ ಇನ್ನೊಂದು ತುಸು ಜಡವಾಗಿದೆ.

ಒಂದೊಂದು ಸಲ ಒಂದು ತಲೆ ಒಂದು ದಿಕ್ಕಿನಲ್ಲಿ ಹೋಗಬಯಸಿದರೆ, ಇನ್ನೊಂದು ತಲೆ ಇನ್ನೊಂದು ದಿಕ್ಕಿನತ್ತ ಹೋಗಲು ಬಯಸುತ್ತದೆಯಂತೆ. ತಲೆಯಲ್ಲಿರುವ ಎರಡು ಬಾಯಿಗಳಿಗೂ ಬೇರೆ ಬೇರೆಯಾಗಿಯೇ ಆಹಾರ ಇಡಬೇಕು ಮತ್ತು ಎರಡು ತಲೆಗಳ ಮಧ್ಯೆ ತಡೆಯೊಂದನ್ನು ಇಡಬೇಕು. ಇಲ್ಲದಿದ್ದರೆ ಹಾವು ಹಸಿದಿದ್ದಾಗ ಒಂದು ಬಾಯಿ ಇನ್ನೊಂದರ ಆಹಾರವನ್ನು ಕದಿಯುತ್ತದಂತೆ.

ಒಟ್ಟಾರೆ ಪ್ರದರ್ಶನಕ್ಕಿಟ್ಟ ಈ ಹಾವಿನ ಹಾವಭಾವ ನೋಡಿದ ಜನರೆಲ್ಲ ಆಶ್ಚರ್ಯ ಚಕಿತಗೊಂಡಿದ್ದಾರೆ. ಇಡೀ ಯೂರೋಪ್ ಖಂಡದಲ್ಲೇ ಎರಡು ತಲೆಗಳುಳ್ಳ ಹಾವು ಇದೊಂದೇ ಎನ್ನುವುದು ಇದರ ಹೆಗ್ಗಳಿಕೆ.

■ ವಿದ್ಯಾ ವಿ ಹಾಲಭಾವಿ